## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಎ.ಸಿ.ಓಂಕಾರಪ್ಪ, ಗ್ರೇಡ್-1 ಕಾರ್ಯದರ್ಶಿ, ಕೆ. ಬಿದರೆ ಗ್ರಾಮ ಪಂಚಾಯಿತಿ, ಹಿಂದಿನ ಸಿಂಗಟಗೆರೆ ಗ್ರಾಮ ಪಂಚಾಯಿತಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ ಆದೇಶ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರು ಜಿಲ್ಲೆ ರವರ ಆದೇಶ ಸಂಖ್ಯೆ:ಜಿಪ್ರಂಚಿ:ಅ6, ಸಿಬ್ಬಂದಿ:113:2013-14, ದಿನಾಂಕ:25.01.2018.
2. ಶ್ರೀ ಎ.ಸಿ.ಓಂಕಾರಪ್ಪ, ಗ್ರೇಡ್-1 ಕಾರ್ಯದರ್ಶಿ, ಕೆ. ಬಿದರೆ ಗ್ರಾಮ ಪಂಚಾಯಿತಿ, ವೀರೇಶ ವಿ ನಾಯ್ಕರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ:23.05.2018.
3. ಸರ್ಕಾರದಿಂದ ವಿಚಾರಣೆಗೆ ಹಾಜರಾಗಲು ನೀಡಿದ ತಿಳುವಳಿಕೆ ಪತ್ರ ದಿನಾಂಕ:01.02.2019.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ, ಶ್ರೀ ಓಂಕಾರಪ್ಪ ಎ.ಸಿ. ಗ್ರೇಡ್-1 ಕಾರ್ಯದರ್ಶಿ, ಇವರು ಹಿಂದಿನ ಸಿಂಗಟಗೆರೆ ಗ್ರಾಮ ಪಂಚಾಯತ್, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಕರ್ತವ್ಯ ನಿರ್ವಹಿಸುತ್ತಿದ್ದಾಗ, ತಾತ್ಕಾಲಿಕ ಹಣದುರುಪಯೋಗ ಹಾಗೂ ಕರ್ತವ್ಯಲೋಪದ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಲಾಗಿತ್ತು. ಸದರಿ ನೌಕರರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾದ ಹಿನ್ನೆಲೆಯಲ್ಲಿ, ಸದರಿ ದುರುಯೋಗವನ್ನು ತಾತ್ಕಾಲಿಕ ದುರುಪಯೋಗ ಎಂದು ಪರಿಗಣಿಸಿ "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಇವರು ತಮ್ಮ ಆದೇಶ ಸಂಖ್ಯೆ:ಜಿಪಂಚಿ:ಅ6:ಸಿಬ್ಬಂದಿ:113:2013-14, ದಿನಾಂಕ:25-01-2018ರ ಆದೇಶದಲ್ಲಿ ತಾತ್ಕಾಲಿಕವಾಗಿ ದುರುಪಯೋಗವಾದ ಮೊತ್ತಕ್ಕೆ ವಾರ್ಷಿಕ ಶೇಕಡಾ 15ರಂತೆ ಬಡ್ಡಿಯನ್ನು ಲೆಕ್ಕಹಾಕಿ ಲೋಪವೆಸಗಿದ ನೌಕರರಿಂದ ವಸೂಲಿ ಮಾಡಿ ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡುವಂತೆ ಹಾಗೂ ಸದರಿ ನೌಕರರಿಗೆ ಕೆ.ಸಿ.ಎಸ್(ಸಿ.ಸಿ.ಎ) ನಿಯಮಾವಳಿ 1957ರ ನಿಯಮ 8(iv)(a)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ "ಕಾಲಿಕ ವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವ ದಂಡನೆಯನ್ನು ವಿಧಿಸಿರುತ್ತಾರೆ ಹಾಗೂ ಕೆಳಗಿನ ಹಂತಕ್ಕೆ ಇಳಿಸುವ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಆದೇಶಿಸಿದ್ದರು.

ಮೇಲೆ ಓದಲಾದ (1)ರ ಆದೇಶದ ವಿರುದ್ಧ ಶ್ರೀ ಓಂಕಾರಪ್ಪ ಎ.ಸಿ. ಗ್ರೇಡ್-1 ಕಾರ್ಯದರ್ಶಿ, ಇವರು ಹಿಂದಿನ ಸಿಂಗಟಗೆರೆ ಗ್ರಾಮ ಪಂಚಾಯತ್, ಕಡೂರು ತಾ॥, ಚಿಕ್ಕಮಗಳೂರು ಜಿಲ್ಲೆ ಇವರು ಸರ್ಕಾರಕ್ಕೆ ಮೇಲೆ ಓದಲಾದ (2)ರಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:-

- ಮು.ಕಾ.ನಿಯವರು ವಿಧಿಸಿರುವ ದಂಡನಾದೇಶದಿಂದ ನಿವೃತ್ತಿ ಅಂಚಿನಲ್ಲಿರುವ ತಮಗೆ 2012ರಿಂದಲೂ ಸೇವಾ ಜೇಷ್ಠತೆಯಿದ್ದರೂ ಮುಂಬಡ್ತಿ ಇಲ್ಲದಂತಾಗುತ್ತದೆ. ತಾವು ದಿನಾಂಕ:19.07.2012ರಂದು ಚೌಡಳ್ಳಿ ಗ್ರಾಮ ಪಂಚಾಯಿತಿಗೆ ಕಾರ್ಯವರದಿ ಮಾಡಿಕೊಂಡಿರುತ್ತೇನೆ.
- 2012-13ನೇ ಸಾಲಿನಿಂದ ಕಡೂರು ತಾಲ್ಲೂಕಿನ ಕೆ.ಬಿದರೆ ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರ ಪಿ.ಡಿ.ಓ ಆಗಿ ಕರ್ತವ್ಯನಿರ್ವಹಿಸುತ್ತಿದ್ದಾಗ, ತಮಗೆ ಹೆಚ್ಚುವರಿಯಾಗಿ ಸಿಂಗಟಗೆರೆ ಗ್ರಾಮ ಪಂಚಾಯಿತಿ ಪಿ.ಡಿ.ಓ ಆಗಿ ಕರ್ತವ್ಯನಿರ್ವಹಿಸಲು ಹೆಚ್ಚುವರಿ ಪ್ರಭಾರ ವಹಿಸಲಾಗಿತ್ತು.

- ಎರಡೂ ಗ್ರಾಮ ಪಂಚಾಯಿತಿಗಳು ಗ್ರೇಡ್-1 ಗ್ರಾಮ ಪಂಚಾಯಿತಿಗಳಾಗಿದ್ದು, ದ್ವಿತೀಯ ದರ್ಜೆ ಲೆಕ್ಕಸಹಾಯಕರಾಗಲಿ, ಕಾರ್ಯದರ್ಶಿಯಾಗಲಿ ನೇಮಕವಾಗಿರಲಿಲ್ಲ. ಎರಡೂ ಗ್ರಾಮ ಪಂಚಾಯಿತಿಯ ಕಾರ್ಯಭಾರದ ಒತ್ತಡದಲ್ಲಿ ಎಲ್ಲಾ ಕೆಲಸಗಳನ್ನು ತಾವೊಬ್ಬರೆ ನಿರ್ವಹಿಸಬೇಕಾಗಿತ್ತು ಮತ್ತು ತಮಗೆ ಆರೋಗ್ಯ ಸಮಸ್ಯೆ ಇದ್ದುದರಿಂದ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಸಹಕಾರದಿಂದ ಎಲ್ಲಾ ಕರ್ತವ್ಯ ನಿರ್ವಹಿಸಬೇಕಾಗಿತ್ತು.
- ತಮ್ಮ ಹೆಚ್ಚುವರಿ ಪ್ರಭಾರವನ್ನು ತೆರವುಗೊಳಿಸಲು ಅನೇಕ ಬಾರಿ ತಾಲ್ಲೂಕು ಪಂಚಾಯಿತಿಗೆ ಮನವಿ ಮಾಡಿದರೂ ಪ್ರಯೋಜನವಾಗಿರಲಿಲ್ಲ.
- ಸಿಂಗಟಗೆರೆ ಗ್ರಾಮ ಪಂಚಾಯಿತಿ ಬಿಲ್‌ಕಲೆಕ್ಟರ್‌ಗಳಾದ ವೆಂಕಟೇಶರಾವ್ ಮತ್ತು ವಿಶ್ವಾರಾಧ್ಯ ಇವರುಗಳು ತೆರಿಗೆ ಸಂಗ್ರಹಣೆ ಮಾಡಿದ ಹಣವನ್ನು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡದೇ ದುರುಪಯೋಗಪಡಿಸಿಕೊಂಡಿದ್ದು, ಸದರಿಯವರ ವಿರುದ್ಧ ಕ್ರಮಕೈಗೊಳ್ಳು ಸ್ಥಳೀಯ ಚುನಾಯಿತ ಪ್ರತಿನಿಧಿಗಳ ತಡೆಒಡ್ಡುತ್ತಿದ್ದರು. ಅಂತಿಮವಾಗಿ ಬಿಲ್‌ಕಲೆಕ್ಟರ್‌ಗಳು ಬಳಸಿಕೊಂಡಿದ್ದ ಪೂರ್ಣ ಹಣವನ್ನು ಒತ್ತಾಯಪೂರ್ವಕವಾಗಿ ಕಟ್ಟಿಸಿರುತ್ತೇನೆ. ಈ ಮೊತ್ತಕ್ಕೆ ಶೇ.15 ಬಡ್ಡಿ ಕಟ್ಟಬೇಕೆಂದು ಸೂಚಿಸಲಾಗಿರುತ್ತದೆ.
- 13ನೇ ಹಣಕಾಸು ಯೋಜನೆಯ ಕಾಮಗಾರಿಗಳ ನಿರ್ವಹಣೆ ಬಾಬ್ತು ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆ ಬಾಬ್ತು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಸಂಪೂರ್ಣವಾಗಿ ಜಮಾ ಮಾಡಿರುತ್ತೇನೆ.
- ನಿವೃತ್ತಿ ಅಂಚಿನಲ್ಲಿರುವ ಹಾಗೂ ಅನಾರೋಗ್ಯದಿಂದ ಬಳಲುತ್ತಿರುವ ತಮಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ವಿಧಿಸಿರುವ ಆದೇಶವನ್ನು ರದ್ದುಪಡಿಸಿ ಮುಂಬಡ್ತಿಗೆ ಅವಕಾಶ ನೀಡಬೇಕೆಂದು ಕೋರಿರುತ್ತಾರೆ.

ಮೇಲ್ಮನವಿದಾರರಾದ ಶ್ರೀ ಎ.ಸಿ.ಓಂಕಾರಪ್ಪ, ಗ್ರಾಮ ಪಂಚಾಯತ್ ಕಾರ್ಯದರ್ಶಿ(ಗ್ರೇಡ್-1)ರವರು ತಮಗೆ ಎರಡು ಗ್ರಾಮ ಪಂಚಾಯಿತಿಗಳಲ್ಲಿ ಪ್ರಭಾರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರಿಂದ ಹೆಚ್ಚಿನ ಕಾರ್ಯ ಒತ್ತಡದಿಂದ ಎಂಜಿಎನ್‌ಆರ್‌ಇಜಿಎ, 13ನೇ ಹಣಕಾಸು ಯೋಜನೆಯಡಿ ಅನುಷ್ಠಾನಗೊಳಿಸಲಾದ ಕಾಮಗಾರಿ ಬಿಲ್‌ಗಳಲ್ಲಿ ಕಡಿತಗೊಳಿಸಿಲಾದ ತೆರಿಗೆ ಮೊತ್ತ ಹಾಗೂ ಗ್ರಾಮ ಪಂಚಾಯಿತಿ ತೆರಿಗೆ ವಸೂಲಿಯ ಮೊತ್ತವನ್ನು ವಿಳಂಬವಾಗಿ ಸಂಬಂಧಿಸಿದ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿರುವುದಾಗಿ ತಿಳಿಸುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಮೇಲ್ಮನವಿದಾರರು ತಮ್ಮ ಕಾರ್ಯಭಾರದ ಒತ್ತಡದಿಂದ ವಿಳಂಬವಾಗಿ ತೆರಿಗೆ ಹಣವನ್ನು ಜಮಾ ಮಾಡಿರುವುದಾಗಿ ತಿಳಿಸಿದ ಹೇಳಿಕೆಯನ್ನು ಪರಿಗಣಿಸಲಾಯಿತು. ಈ ಹಿನ್ನೆಲೆಯಲ್ಲಿ, ಸದರಿ ನೌಕರರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿ ನೌಕರರಿಗೆ "ಕಾಲಿಕವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವಂತೆ" ವಿಧಿಸಿದ್ದ ದಂಡನೆಯನ್ನು ಮಾರ್ಪಡಿಸಿ "ವಾಗ್ದಂಡನೆ" ವಿಧಿಸಲು ಸರ್ಕಾರವು ನಿರ್ಣಯಿಸಿದೆ ಹಾಗೂ ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ)ನಿಯಮಗಳು 1957 ನಿಯಮ 25ರಡಿಯಲ್ಲಿ ಮೇಲ್ಮನವಿಯನ್ನು ಪರಿಗಣಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/312/ಗ್ರಾಪಂಕಾ/2018**
**ಬೆಂಗಳೂರು, ದಿನಾಂಕ:23-04-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ)ನಿಯಮಗಳು 1957ರ ನಿಯಮ25(2)ರಡಿಯಲ್ಲಿ, ಶ್ರೀ ಓಂಕಾರಪ್ಪ ಎ.ಸಿ. ಗ್ರೇಡ್-1 ಕಾರ್ಯದರ್ಶಿ, ಇವರು ಹಿಂದಿನ ಸಿಂಗಟಗೆರೆ ಗ್ರಾಮ ಪಂಚಾಯತ್, ಕಡೂರು ತಾ॥. ಚಿಕ್ಕಮಗಳೂರು ಜಿಲ್ಲೆ ಇವರು ಸಲ್ಲಿಸಿದ್ದ ಮೇಲ್ಮನವಿಯನ್ನು ಪರಿಗಣಿಸಿದೆ.

ಮೇಲ್ಮನವಿದಾರರು ತಾತ್ಕಾಲಿಕ ಹಣದುರುಪಯೋಗದ ಆರೋಪಗಳಿಗೆ ಸಂಬಂಧಿಸಿದಂತೆ ನೀಡಲಾದ ಹೇಳಿಕೆಯನ್ನು ಪರಿಗಣಿಸಿ ಸದರಿ ನೌಕರರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿ ನೌಕರರಿಗೆ "ಕಾಲಿಕವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವಂತೆ" ವಿಧಿಸಿದ್ದ ದಂಡನೆಯನ್ನು ಮಾರ್ಪಡಿಸಿ "ವಾಗ್ದಂಡನೆ" ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

24/4/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಪ್ರತಿಗಳು:</u>

1) ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರು ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
4) ಶ್ರೀ ಓಂಕಾರಪ್ಪ ಎ.ಸಿ. ಗ್ರೇಡ್-1 ಕಾರ್ಯದರ್ಶಿ, ಇವರು ಹಿಂದಿನ ಸಿಂಗಟಗೆರೆ ಗ್ರಾಮ ಪಂಚಾಯತ್, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
5) ಗಣಕ ಕೋಶ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.